# ವಿಶ್ವಸುಂದರಿ ಕನಸಿನಲ್ಲಿ ಮಣಿಕಾ

■ ಆರ್ಕೆಟಿ




ವಾತಾವರಣದಲ್ಲಿ ಬೀಸುವ ತಂಗಾಳಿ ಮೈ ನಡುಗಿಸುತ್ತಿದೆ. ವಿಶ್ವಸುಂದರಿ ಸ್ಪರ್ಧೆಯ ಸುದ್ದಿ ಈ ಗಾಳಿಯೊಂದಿಗೆ ಸುಳಿದು ಬಂದಿದೆ. ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ 74ನೇ ವಿಶ್ವಸುಂದರಿ ಸ್ಪರ್ಧೆಗೆ ಥಾಯ್ಲೆಂಡ್ ವೇದಿಕೆಯನ್ನು ಸಜ್ಜು ಮಾಡುತ್ತಿದೆ. ಆ ಸ್ಪರ್ಧೆಯಲ್ಲಿ ಹೆಜ್ಜೆಯ ಗುರುತು ಮೂಡಿಸಲು ಸುಂದರಿಯರೆಲ್ಲ ವಿಶ್ವವ್ಯಾಪಿ ಅಣಿಗೊಳ್ಳುತ್ತಿದ್ದಾರೆ. ಅದೀಗ ತರುಣ ತರುಣಿಯರ ಕುತೂಹಲದ ವಿಷಯ ವಿನಿಮಯದ ಸಂಗತಿಯೂ ಆಗಿದೆ. ಭಾರತ ವಿಶ್ವಸುಂದರಿ ಸ್ಪರ್ಧೆಗೆ ತನ್ನ ಪ್ರತಿನಿಧಿಯನ್ನು ಕಳಿಸಲು 'ಮಿಸ್ ಯೂನಿವರ್ಸ್ ಇಂಡಿಯಾ 2025' ಸ್ಪರ್ಧೆಯನ್ನು ಜೈಪುರದಲ್ಲಿ ಈಚೆಗೆ ಏರ್ಪಡಿಸಿತ್ತು. ಅದರಲ್ಲಿ ಮಣಿಕಾ ವಿಶ್ವಕರ್ಮ 'ಮಿಸ್ ಯೂನಿವರ್ಸ್' ಕಿರೀಟವನ್ನು ತಮ್ಮ ಮುಡಿಗೆ ಏರಿಸಿಕೊಂಡಿದ್ದಾರೆ.

ಮಣಿಕಾ ರಾಜಸ್ಥಾನದ ಶ್ರೀಗಂಗಾನಗರದ ಮೂಲದವರು. ಈಗಿನ್ನು ಅವರಿಗೆ 22 ವರ್ಷದ ಪ್ರಾಯ. ಆಕೆ, ದೆಹಲಿ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾರೆ. ಶಿಕ್ಷಣದ ಬಗ್ಗೆ ತಮಗೆ ಇರುವ ಅದಮ್ಯ ಪ್ರೀತಿಯನ್ನು ತೋರಿಸಿದ್ದಾರೆ. ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಷಯವನ್ನು ಓದುತ್ತಿರುವ ಅವರು ಮುಂದೆ ಇನ್ನೂ ಓದುವ ಆಸೆಯಿದೆ ಎಂಬುವುದನ್ನು ಪ್ರಕಟಿಸಿದ್ದಾರೆ. ಕಳೆದ ವರ್ಷ 'ಮಿಸ್ ಯೂನಿವರ್ಸ್ ರಾಜಸ್ಥಾನ 2024' ಕಿರೀಟವನ್ನೂ ತಮ್ಮದಾಗಿಸಿಕೊಂಡ ಹಿರಿಮೆ ಅವರದು. ರಾಜಸ್ಥಾನ ಸುಂದರಿ ಸ್ಪರ್ಧೆಯಲ್ಲಿ ಮಣಿಕಾ ಅವರಿಗೆ 48 ಸುಂದರಿಯರು ಪೈಪೋಟಿ ನೀಡಿದ್ದರು ಎನ್ನುವುದು ಇತಿಹಾಸ.

**ಚಳಿ ಗಾಳಿಯ ಆರಂಭ ಕಾಲದ ಬದಲಾವಣೆಗೆ ಹವಣಿಸುತ್ತಿದ್ದರೆ, ವರ್ಷ ಕೊನೆಗೊಳ್ಳುವ ಹೊತ್ತಿಗೆ ಥಾಯ್ಲೆಂಡ್ ವಿಶ್ವ ಸುಂದರಿಗೆ ಕಿರೀಟ ತೊಡಿಸಲು ತುಡಿಯುತ್ತಿದೆ. ವಿಶ್ವಮಟ್ಟದ ಈ ವೇದಿಕೆಯಲ್ಲಿ ಭಾರತದ ಪ್ರತಿನಿಧಿಯಾಗಿ ಮಣಿಕಾ ವಿಶ್ವಕರ್ಮ ಕಾಣಿಸಿಕೊಳ್ಳುತ್ತಿದ್ದಾರೆ.**

'ಮಿಸ್ ಯೂನಿವರ್ಸ್' ಕೀರ್ತಿಗೆ ಭಾಜನರಾದ ತಕ್ಷಣ ಅವರು ತಮ್ಮ ಮಾರ್ಗದರ್ಶಕರು, ಅಧ್ಯಾಪಕರು, ಪೋಷಕರಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಭಾರತವನ್ನು ಪ್ರತಿನಿಧಿಸುವ ತಾವು ವಿಶ್ವ ಸುಂದರಿ ಕಿರೀಟವನ್ನು ತೆಗೆದುಕೊಂಡುಬರುವ ಭರವಸೆ ಇದೆ ಎನ್ನುವ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಶಾಸ್ತ್ರೀಯ ನೃತ್ಯದಲ್ಲಿ ನೈಪುಣ್ಯ ಸಾಧಿಸಿರುವ ಮಣಿಕಾ, ಎನ್‌ಸಿಸಿ ತರಬೇತಿಯನ್ನು ಪಡೆದಿದ್ದಾರೆ. ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿರುವ ಅವರನ್ನು ಲಲಿತ ಕಲಾ ಅಕಾಡೆಮಿ ಮತ್ತು ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಂತಹ ಪ್ರತಿಷ್ಠಿತ ಸಂಸ್ಥೆಗಳು ಗೌರವಿಸಿವೆ.

ಮಿಸ್ ಯೂನಿವರ್ಸ್ ಇಂಡಿಯಾ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ, ಸ್ತ್ರೀ ಶಿಕ್ಷಣ ಉತ್ತೇಜನ ಮತ್ತು ಬಡವರಿಗೆ ಆರ್ಥಿಕ ನೆರವು ನೀಡುವ ವಿಷಯದಲ್ಲಿ ನಿಮ್ಮ ಆಯ್ಕೆಯ ವಿಷಯ ಯಾವುದು ಎನ್ನುವ ಪ್ರಶ್ನೆಯನ್ನು ಕೇಳಲಾಗಿತ್ತು. ಅದಕ್ಕೆ ಪ್ರಬುದ್ಧ ಉತ್ತರವನ್ನೇ ಮಣಿಕಾ ನೀಡಿದ್ದಾರೆ. ಅನಕ್ಷರತೆ ಮತ್ತು ಬಡತನ ಒಂದನ್ನು ಬಿಟ್ಟು ಒಂದಿಲ್ಲ. ಒಂದೇ ನಾಣ್ಯದ ಎರಡು ಮುಖಗಳಂತೆ ಅವೆರಡೂ ಇವೆ. ಶಿಕ್ಷಣವೇ ನನ್ನ ಮೊದಲ ಆಯ್ಕೆ. ಯಾವತ್ತೂ ಬಡತನ ಶಾಶ್ವತವಾಗಿ ಇರುವುದಿಲ್ಲ. ಅದು ಯಾವ ಕಾಲ ಸಂದರ್ಭದಲ್ಲಿ ಆದರೂ ಬದಲಾವಣೆ ಆಗಬಹುದು. ಶಿಕ್ಷಣದಿಂದ ಬಡತನವನ್ನು ಮೆಟ್ಟಿ ನಿಲ್ಲುವ ಶಕ್ತಿಯೂ ಬರಲಿದೆ. ಶಿಕ್ಷಣದಿಂದ ನಮ್ಮ ನಂತರದ ಪೀಳಿಗೆಯ ಭವಿಷ್ಯವನ್ನು ಉತ್ತಮಗೊಳಿಸಲು ಸಾಧ್ಯ. ಅನಕ್ಷರತೆ ನಿವಾರಣೆಯಿಂದ ಬಡತನ ನಿರ್ಮೂಲನೆಯನ್ನು ಮಾಡಬಹುದು. ಆದ್ದರಿಂದ ಶಿಕ್ಷಣವನ್ನೇ ಆಯ್ಕೆ ಮಾಡಿಕೊಳ್ಳುವುದಾಗಿ ತಿಳಿಸಿದ್ದಾರೆ.

ಸ್ಪರ್ಧೆ ಎನ್ನುವುದು ನಮ್ಮ ಎದೆಯಲ್ಲಿ ಸ್ಫೂರ್ತಿಯ ಹಣತೆಯನ್ನು ಹಚ್ಚುವುದರಿಂದ ನನಗೆ ಅದೇ ಸೌಂದರ್ಯಕ್ಕಿಂತ ದೊಡ್ಡದು ಎನ್ನುವ ಭಾವನೆ ಇದೆ. ನಮ್ಮ ವ್ಯಕ್ತಿತ್ವವನ್ನು ಗುರುತಿಸುವ ವೇದಿಕೆ ಅದಾಗಿದೆ ಎಂದು ಪ್ರಬುದ್ಧವಾಗಿ ಮಾತನಾಡುವ ಚತುರೆ ಮಣಿಕಾ. ಅವರು ಥಾಯ್ಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಸುಂದರಿ ಸ್ಪರ್ಧೆಯಲ್ಲಿ 130 ದೇಶಗಳ ಸುಂದರಿಯರಿಗೆ ಪೈಪೋಟಿಯನ್ನು ನೀಡಿ ವಿಶ್ವ ಸುಂದರಿ ಪಟ್ಟವನ್ನು ತಮ್ಮದಾಗಿಸಿಕೊಳ್ಳುವ ಹುಮ್ಮಸ್ಸಿನಲ್ಲಿ ಇದ್ದಾರೆ. ■